# ಶ್ರೀ ಮುಖ್ಯಪ್ರಾಣದೇವರ ಸ್ತೋತ್ರ ಸುಳಾದಿ

ರಾಗ– ಕಾಂಬೋಧಿ

ಧ್ರುವತಾಳ

ಕೋತಿಯಾದರೆ ಬಿಡನೊ ಬಲುಪರಿ ।
ಭೂತಳದೊಳು ಪಾರ್ಯಾಡಲು ಬಿಡೆನೊ ।
ಖ್ಯಾತಿ ತೊರೆದು ಕಚ್ಚುಟ ಹಾಕಲು ಬಿಡೆನೊ ।
ಚಾತುರ ಬಿಟ್ಟರೆ ಬಿಡೆನೊ ನಾ ಬಿಡೆನೊ ।
ಭೀತಿ ಬೀರಲು ಬಿಡೆನೊ ಮಾತು ।
ಮಾತಿಗೆ ಹಲ್ಲು ತೋರಲು ಬಿಡೆನೊ ।
ಗಾತುರ ಗಗನಕ್ಕೆ ಬೆಳಿಸಲು ಬಿಡೆನೊ ।
ಕೋತಿ ಸೇವಿಸಲು ಬಿಡೆನೊ ।
ಆತುರದಲಿ ವನಧಿ ಲಂಘಿಸಿದರೆ ಬಿಡೆ ।
ಆ ತರುಗಳ ಕಿತ್ತಲು ಬಿಡೆನೋ ।
ವೀತಿಹೋತ್ರನ ಬಾಲದಲ್ಲಿ ಇಟ್ಟರೆ ಬಿಡೆ ।
ಜಾತಿ ಧರ್ಮವ ಬಿಟ್ಟರೆ ಬಿಡೆನೊ ।
ಈತರದಲ್ಲಿ ನೀನು ಇದ್ದರೇನಯ್ಯ ಬೆ ।
ನ್ನಾತು ಕೇಳುವುದು ನಾ ಬಿಡಬಲ್ಲೆನೇ ।
ತಾತಾ ಇನ್ನಿದರಿಂದ ಆವದಾದರು ಬರಲಿ ।
ದಾತಾ ಮತ್ತಿದರಿಂದ ಏನಾದರಾಗಲಿ ।
ಸೋತು ಹಿಂದಗದು ಪೋದರೆ ನಿನ್ನ ಪದದಾಣೆ ।
ಯಾತಕ್ಕೆ ಸಂಶಯವೋ ಬಿಡೆನೊ ಬಿಡೆನೊ ಖ ।
ದ್ಯೊತ ಮಂಡಲ ಪೋಗಲು ಬಿಡೆನೊ ।
ಮಾತು ಪೊಳ್ಳಾದರೆ ನೂರೊಂದು ಕುಲ ಎನ್ನ ।
ಗೋತ್ರದವರಿಗೆ ಗತಿ ಎಲ್ಲದೋ ।
ವಾತನ್ನ ಮಗವಾತ ಆತನ್ನ ರೂಪವ ।
ಗಾತುರದಲ್ಲಿ ನಿನ್ನೊಳಗೆ ತೋರೊ ।
ಜ್ಯೋತಿರ್ಮಯ ರೂಪ ವಿಜಯ ವಿಠ್ಠಲರೇಯನ ।
ದೂತದುರ್ಜನಹಾರಿ ದು:ಖನಿವಾರಿ ॥೧॥

–ಮಟ್ಟತಾಳ–

ಭೂತಳದೊಳುಗೆ ಇದ್ದ ಭೂಮಿ ಸುತ್ತಲು ಬಿಡೆ ।
ಭೀತಿನಾಮವನ್ನು ಇಟ್ಟುಕೊಂಡರೆ ಬಿಡೆ ।
ನೀ ತಿರಿದುಂಡರೆ ಬಿಡೆನೊ ಬಿಡೆನೊ ಆ ।
ರಾತಿಗಳಿಗೆ ಸೋತು ಅಡವಿ ಸೇರಲು ಬಿಡೆನೊ ।
ಸೋತುಮತವ ಬಿಟ್ಟು ಅಡಗಿ ಮಾಡಲು ಬಿಡೆ ।
ಘಾತಕ ನೀನಾಗಿ ಕುಲವ ಕೊಂದರೆ ಬಿಡೆ ।
ಮಾತುಗಾರಿಕೆಯಿಂದ ಯತಿಯಾದರೆ ಬಿಡೆ ।
ಪ್ರೀತಿ ಸಲಹೊ ಎನ್ನ ಸಾಕದಿದ್ದರೆ ನಿನ್ನ ।
ಪೂತರೆ ದ್ವಿತಿಯೇಶನೆಂದು ಪೊಗಳಲ್ಯಾಕೆ ।
ನಾಥನಲ್ಲಿ ನಿನ್ನ ಮಂತ್ರಿತನವೇನೊ ।
ಪೋತಭಾವ ನಮ್ಮ ವಿಜಯ ವಿಠ್ಠಲರೇಯನ ।
ಆತುಮನದೊಳಗಿಟ್ಟ ಭಾರತೀರಮಣಾ ॥೨॥

–ತ್ರಿವಿಡಿತಾಳ–

ಭಾರವೆ ನಾನೊಬ್ಬ ಶರಣಾ ನಿನಗಲ್ಲವೆ ।
ಬಾರಿ ಬಾರಿಗೆ ನಿನ್ನ ಅಹಿಕ ಸೌಖ್ಯ ।
ಮೀರದೆ ಕೊಡು ಎಂದು ಬೇಡಿ ಬ್ಯಾಸರಿಸಿ ವಿ ।
ಸ್ತಾರವಾಗಿ ಗುರುವೆ ಕಾಡಿದೆನೇ ।
ಧಾರುಣಿಯೊಳು ಪುಟ್ಟಿ ಪಾರಾಗಾಣದ ಸಂ ।
ಸಾರಹೇಯವೆಂದು ಕೇಳಿ ನಿನಗೆ ।
ದೂರಿದೆನೊ ಇದು ದೈನ್ಯದಿಂದಲಿ ವಿ ।
ಚಾರಿಸಿದರೊಳಿತೆ ಇಲ್ಲದಿದ್ದರೆ ಲೇಸೆ ।
ಸಾರಿ ಸಾರಿಗೆ ನಿನ್ನ ಸೌಭಾಗ್ಯ ಚರಣವ ।
ತೋರಿಸಿ ಧನ್ಯನ್ನ ಮಾಡೆಂದೆನೊ ।
ಕಾರುಣ್ಯದಲಿ ಕೈಟಭಾರಿಪ್ರಿಯನೆ ।
ಆರನ್ನ ಕಾಣೆನೊ ನಿನ್ನ ವಿನಾ ।
ಕೀರುತಿ ಅಪಕೀರ್ತಿ ನಿನ್ನದಯ್ಯ ।

www.YouSigma.com

ವಾರಣಾವರವಂದ್ಯ ವಿಜಯವಿಠ್ಠಲರೇಯನ ।
ಸೇರುವ ಪರಿಮಾಡೊ ತಾರತಮ್ಯ ಭಾವದಲಿ ॥೩॥

–ಅಟ್ಟತಾಳ–

ನೀನು ಒಲಿಯೇ ಹರಿ ತಾನೆ ಒಲಿವನಯ್ಯಾ ।
ನೀನು ಮುನಿದಡೆ ಹರಿ ತಾನೆ ಮಿನಿವನು ।
ಏನೆಂಬೆ ನಿನ್ನ ಮೇಲಣ ಹರಿಕಾರುಣ್ಯ ।
ನೀನಲ್ಲದಿಲ್ಲದ ಸ್ಥಾನದಿ ತಾನಿಲ್ಲಾ ।
ಪ್ರಾಣೇಶ ನಮೋ ನಮೋ ನಿನ್ನ ಪಾದಾಬ್ಜಕ್ಕೆ ।
ವಾನರೇಶ ಸುಗ್ರೀವ ವಾಲಿ ಸಾಕ್ಷಿ ।
ಜ್ಞಾನೇಶ ಭಕ್ತಿ ವಿರಕ್ತೇಶ ಅಮರೇಶ ।
ಆನಂದ ಆನಂದ ಮೂರುತಿ ಗುರುರಾಯ ।
ಪಾಣಿಗ್ರಹಣ ಮಾಡು ಪತಿತಪಾವನ ದೇವ ।
ಪ್ರಾಣೇಂದ್ರಿಯಗಳು ದೇಹ ಚೇತನ ಚಿತ್ತವ ।
ಧ್ಯಾನ ಮಾಡಲಿ ಸರ್ವ ನಿನ್ನಾಧೀನವೆಂದು ।
ನೀನಿರೆ–ಲಾವಾಗ ಅನ್ಯ ಜನರಿಗೆ ಮತ್ತಾನು ।
ಬಿನ್ನೈಪೇನೆ ದೇಹತ್ಯಾಗವಾಗಿ ।
ಶ್ರೀನಾಥ ವಿಜಯವಿಠ್ಠಲರೇಯನ ಪಾದ ।
ರೇಣು ಧರಿಸುವ ಸರ್ವರುದ್ಧಾರೀ ॥೪॥

–ಆದಿತಾಳ–

ಎಲ್ಲ ಕಾಲದಲ್ಲಿ ನಿನ್ನಲ್ಲಿ ಭಕ್ತಿ ಇಪ್ಪ ।
ಸಲ್ಲಿಲಿತ ಮನುಜರ ಪಾದಪಾಂಸ ಶಿರ ।
ದಲ್ಲಿ ಧರಿಸುವಂತೆ ಸಂತತ ಮತಿಯಿತ್ತು ।
ಬಲ್ಲಿದ ಕಾಮ ಬಿಡಿಸು ಬಲವಂತ ಗುಣವಂತ ।
ಬಲ್ಲವ ಭವದೂರ ನೀನೆ ಗತಿಯೊ ಜಗ ।
ದೊಲ್ಲಭ ಮುಂದಣ ವಾಣೀಶ ಸುಖಪೂರ್ಣ ।
ಅಲ್ಲದಿದ್ದರೆ ಎನ್ನ ಕಾವ ಕರುಣಿಯ ಕಾಣೆ ।

ಮಲ್ಲಮರ್ದನ ನಮ್ಮ ವಿಜಯವಿಠ್ಠಲರೇಯನ ।
ನಿಲ್ಲಿಸಿ ಮನದಲ್ಲಿ ಪ್ರತಿಕೂಲವಾಗಿದೆ ॥೫॥

-ಜತೆ-

ಆನಂತ ಜನುಮಕ್ಕೆ ನೀನೆ ಗುರು ಎಂಬ ।
ಜ್ಞನವೇ ಕೊಡು ಜೀಯಾ ವಿಜಯವಿಠ್ಠಲದಾಸಾ ॥೬॥

**॥ ಪಂಚರತ್ನ ಸುಳಾದಿಗಳು ಮುಗಿದವು ॥**

**॥ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀ ಕೃಷ್ಣಾರ್ಪಣಮಸ್ತು ॥**

www.YouSigma.com